ಕಳೆದ ಮೂರು ವರ್ಷಗಳಲ್ಲಿ ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಸ್ಥಾವರಗಳಿಗೆ ಮಾಪಕ ಅಳವಡಿಸಲು ನಿಗದಿ ಪಡಿಸಲಾದ ಗುರಿ ಮತ್ತು ಸಾಧನೆಯ ವಿವರಗಳು ಈ ಕೆಳಕಂಡಂತಿದೆ.

ಅವಧಿ	ಭೌತಿಕ ಗುರಿ ಸಂಖ್ಯೆಗಳಲ್ಲಿ	ಸಾಧನೆ ಸಂಖ್ಯೆಗಳಲ್ಲಿ
2001–02	–	–
2002–03	10,88,140	3,38,454
2003–04	7,16,797	3,56,102

ಈ) ಈ ವಿದ್ಯುತ್ ಸ್ಥಾವರಗಳಿಗೆ ಮಾಪಕ ಅಳವಡಿಸಲು ಮಾಡಿರುವ ಹಣದ ವೆಚ್ಚವು ಅನಗತ್ಯ ವೆಚ್ಚವಾಗಿರುವುದಿಲ್ಲ. ಈ ಕಾರ್ಯವನ್ನು ಟರ್ನ್ ಕೀ ಆಧಾರದಲ್ಲಿ ನಿರ್ವಹಿಸಲಾಗುತ್ತಿದೆ.

ಉ) ಎನರ್ಜಿ ಆಡಿಟಿಂಗ್‌ನ್ನು ಸಮರ್ಪಕವಾಗಿ ನಿರ್ವಹಿಸಲು ಹಾಗೂ ಉತ್ತರದಾಯಿತ್ವವನ್ನು ನಿಗದಿ ಪಡಿಸಲು ಯೂನಿವರ್ಸಲ್ ಮೀಟರಿಂಗ್ ಕಾರ್ಯಕ್ರಮವು ಅವಶ್ಯಕವಾಗಿದೆ. ಸರ್ಕಾರದ ಯೂನಿವರ್ಸಲ್ ಮೀಟರಿಂಗ್ ಕಾರ್ಯ ನೀತಿಯಂತೆ. ಇದುವರೆವಿಗೆ ಮಾಪಕಗಳನ್ನು ಅಳವಡಿಸದೇ ಇರುವ ಭಾಗ್ಯಜ್ಯೋತಿ/ಕುಟೀರ ಜ್ಯೋತಿ, ನೀರಾವರಿ ಪಂಪು ಸೆಟ್ಟುಗಳು ಮತ್ತು ಬೀದಿ ದೀಪ ಸ್ಥಾವರಗಳಿಗೆ ಮಾಪಕಗಳನ್ನು ಅಳವಡಿಸಬೇಕಾಗಿರುತ್ತದೆ.

.....

116 (281): ಶ್ರೀ ಧ್ರುವನಾರಾಯಣ್ ಆರ್. (ಸಂತೇಮರಳ್ಳಿ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಾವೇರಿ ಜಲಭಾಗ್ಯ ನಿಗಮದ ಕಾರ್ಯವು ರಾಜ್ಯದ ಎಷ್ಟು ಜಿಲ್ಲೆಗಳ ವ್ಯಾಪ್ತಿಗೆ ಬರುತ್ತದೆ;

ಆ) ಈ ನಿಗಮಕ್ಕೆ ಇದುವರೆಗೆ ಸಂಗ್ರಹವಾಗಿರುವ ಬಂಡವಾಳವೆಷ್ಟು;

ಇ) ಸಂಗ್ರಹವಾಗಿರುವ ಹಣವನ್ನು ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಹಂಚಲಾಗಿದೆ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಈ) ಹಂಚಿಕೆಗೆ ಬಳಸಿರುವ ಮಾನದಂಡಗಳೇನು;

ಉ) ಬರಪೀಡಿತ ಚಾಮರಾಜನಗರ ಜಿಲ್ಲೆಗೆ ಈ ನಿಗಮದಿಂದ ವಿಶೇಷವಾಗಿ ಕೈಗೊಂಡಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಕಾವೇರಿ ನೀರಾವರಿ ನಿಗಮದ ಕಾರ್ಯ ವ್ಯಾಪ್ತಿಯು ಕಾವೇರಿ ಕೊಳ್ಳದ ಈ ಕೆಳಕಂಡ 8 ಜಿಲ್ಲೆಗಳಿಗೆ ಒಳಪಟ್ಟಿರುತ್ತದೆ

1) ಮೈಸೂರು 2) ಮಂಡ್ಯ 3) ಚಾಮರಾಜನಗರ 4) ಬೆಂಗಳೂರು ಗ್ರಾಮಾಂತರ
5) ಮಡಿಕೇರಿ 6) ಹಾಸನ 7) ಚಿಕ್ಕಮಂಗಳೂರು 8) ತುಮಕೂರು

ಆ) ರೂ. 249.55 ಕೋಟಿಗಳು

ಇ) ಜಲ ಸಂಪನ್ಮೂಲ ಇಲಾಖೆಯ ವಿಭಾಗಗಳು ಒಂದು ಜಿಲ್ಲೆಗಿಂತ ಹೆಚ್ಚಿನ ಜಿಲ್ಲೆಗಳ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಸಂಗ್ರಹವಾದ ಹಣದ ವಿಭಾಗವಾರು ಹಂಚಿಕೆಯ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಈ ಕೆಳಕಂಡ ಮಾನದಂಡಗಳಂತೆ ಹಂಚಿಕೆಯಾಗಿರುತ್ತದೆ.

1. ನೀರಾವರಿ ಸಾಮರ್ಥ್ಯ ಸೃಷ್ಟಿಯಾಗುವಂತ ಕಾಮಗಾರಿಗಳಿಗೆ ಆದ್ಯತೆ
2. ಸ್ಥಗಿತಗೊಂಡಿದ್ದ ಕ್ಯಾಪಿಟಲ್ ಕಾಮಗಾರಿಗಳನ್ನು ಚಾಲನೆ ಗೊಳಿಸಲು ಆದ್ಯತೆ (ಏತ ನೀರಾವರಿ, ಕಾಲುವೆ ಲೈನಿಂಗ್ ಮುಂತಾದುವುದು)
3. ಕಾಮಗಾರಿಗಳ ಅನುಷ್ಠಾನ ಹಾಗೂ ಪಾವತಿಸಬೇಕಾದ ಮೊತ್ತ

ಉ) ಬರಪೀಡಿತ ಚಾಮರಾಜನಗರ ಜಿಲ್ಲೆಯಲ್ಲಿ ಈ ಕೆಳಕಂಡ ಯೋಜನೆಗಳನ್ನು ಕಾವೇರಿ ನೀರಾವರಿ ನಿಗಮದ ಮೂಲಕ ಕೈಗೊಂಡು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

1. ಕಬಿನಿ 2ನೇ ಹಂತ ಯೋಜನೆ.
2. ಉಡುತೊರೆಹಳ್ಳ ಜಲಾಶಯ ಯೋಜನೆ
3. ಹಿರೇಕೆರೆ ಏತ ನೀರಾವರಿ ಯೋಜನೆ
4. ಸುವರ್ಣಾವತಿ ನದಿಗೆ ಬ್ಯಾರೇಜ್ ನಿರ್ಮಾಣ. ಕಾಲುವೆ ಲೈನಿಂಗ್ ಇತ್ಯಾದಿ
5. ಕಬಿನಿ ಕಾಲುವೆಗಳಲ್ಲಿ ಹೂಳು ತೆಗೆಯುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 281ರ ಅನುಬಂಧ

STATEMENT SHOWING THE DETAILS OF DIVISIONWISE WORK BILLS PAID FOR THE YEAR 2003-04 AND AS ON 30.06.2004.

(Inclusive of payment of pending Bills transferred from Government)

Sl. No.	Name of the Division	Work Bills paid to end or 31.-03-2004	Work Bills paid to end of 30-6-2004 (2004-05)	Total
1	2	3	4	5
	Gorur Zone			
1.	Dam Dn. Gorur	711.73	53.71	765.44
2.	HRBHC Dn. Gorur	690.32	97.59	787.91
3.	HRBC Dn. Holenarasipura	393.52	80.48	474.00
4.	Y.P. Dn. Belur	1155.31	89.2	1244.51
5.	No. 1, HLBC Dn.	380.37	45.76	426.13

1	2	3	4	5
6.	No.3, HLBC Dn. K.R. Pet.	388.97	57	445.97
7.	No.6, HLBC Dn. Pandavapura	306.26	38.79	345.05
8.	No.7, HLBC Dn. Nagamangala	331.9	0	331.90
9.	Q.C. Dn. Gorur	1.56	-	1.56
10.	No.2, C.N.N.L., Hassan.	83.11	0.22	83.33
	Total	4443.05	462.75	4,905.800
	TUMKUR ZONE			
1.	H.C.D. Dn. Gubbi	349.29	138.08	487.37
2.	No. 4 HLBC Dn. Turuvekere	587.62	-	587.62
3.	H.C. Dn. Tumkur	810.33	77.47	887.80
4.	HC Division, Yadiyur	890.78.	140.05	1030.84
5.	HCI Division, Hebbur	629.12	1.01	630.13
6.	No. 2, C.N.N.L., Nagavalli	0	0	0.00
	Total	**3267.14**	**336.61**	**3623.75**
	Grand Total	**16678.03**	**2389.87**	**19067.90**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 281ರ ಅನುಬಂಧ

STATEMENT SHOWING THE DETAILS OF DIVISIONWISE WORK BILLS PAID FOR THE YEAR 2003-04 AND AS ON 30.06.2004.

(Inclusive of payment of pending Bills transferred from Government)

Sl. No.	Name of the Division	Work Bills paid to end of 31.-03-2004	Work Bills paid to end of 30-6-2004 (2004-05)	Total
1	2	3	4	5
	IRRIGATION (S) ZONE			
1.	Q.C. Dn. Mysore	17.38	2.11	19.49
2.	K.R.S. Dn. K.R. Sagar	632.17	145.04	777.21
3.	V.C. Dn. Mandya	528.67	127.79	656.66
4.	D & I Dn, Mandya	312.48	97.62	410.10

1	2	3	4	5
5.	K.R.S. M. & MIP Dn. Malavalli	1270.17	294.58	1564.75
6.	M.P. Dn. Ramanagar	536.17	92.36	628.53
7.	K.R. Dn. Kabini Colony	758.58	52.85	811.43
8.	K.C. Dn. Nanjangud	840.64	62.25	902.89
9.	No.2, K.C. Dn. Kollegal	1476.92	63.84	1540.76
10.	K.C.D. Division, T. Narasipura	209.72	240.86	450.58
11.	No. 1, VCC Dn. Mysore	676.01	179.7	855.71
12.	No.2, VCC Dn. Mysore	454.88	36.72	491.58
13.	H.D. Dn, Hulugunda	124.14	18.23	142.37
14.	H.R. Dn. Kushalnagar	740.33	130.92	871.25
15.	H.R.B.C. Dn. Hunsur	98.65	-	98.65
16.	H.R.B.C. Dn. K.R. Nagar	290.75	22.96	313.71
	Total	8967.84	1567.83	10536.67
17.	CEIS, Mysore	0	2.54	2.54
18.	SE KVCC Mysore	0	0	50.00
19.	SE Mandya	0	0.05	0.05
20.	SE Harangi	0	0.09	0.00
	Total	**0**	**2.68**	**2.88**
	Grand Total	**8967.84**	**1670.51**	**10538.35**

.....

117 (53): ಶ್ರೀ ಈಶ್ವರಪ್ಪ ಕೆ.ಎಸ್. (ಶಿವಮೊಗ್ಗ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯ ತುಂಗಾ ಎಡದಂಡೆ ಹಾಗೂ ಭದ್ರಾ ಬಲದಂಡೆ ನಾಲೆಗಳಲ್ಲಿ ಅಕ್ರಮ ಪಂಪು ಸೆಟ್ ಅಳವಡಿಸಿ ಅತಿಕ್ರಮ ಮಾಡಿರುವವರ ವಿರುದ್ಧ ಸರ್ಕಾರ ಕ್ರಮ ಕೈಗೊಂಡಿದೆಯೇ:

ಆ) ತುಂಗಾ ಹಾಗೂ ಭದ್ರಾ ನಾಲೆಗಳಲ್ಲಿ ಹೊಳು ತುಂಬಿದ್ದು ಹೂಳೆತ್ತುವ ಯೋಜನೆ ಸರ್ಕಾರ ಕೈಗೊಂಡಿದೆಯೇ (ವಿವರವನ್ನು ಒದಗಿಸುವುದೇ)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಶಿವಮೊಗ್ಗ ಜಿಲ್ಲೆಯ ತುಂಗಾ ಭದ್ರಾ ಕಾಲುವೆಗಳಲ್ಲಿ ಅನಧಿಕೃತವಾಗಿ ಅಳವಡಿಸಿರುವ ಅಕ್ರಮ ಪಂಪ್‌ಸೆಟ್‌ಗಳನ್ನು ತೆಗೆಸುವ ಕ್ರಮ ಪ್ರಗತಿಯಲ್ಲಿದ್ದು, ಈವರೆಗೆ 76 ಪಂಪ್‌ಸೆಟ್ಟುಗಳನ್ನು ತೆಗೆಯಲು ತೀರ್ಮಾನ ಕೈಗೊಳ್ಳಲಾಗಿದ್ದು ಈ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.